ತಹಶೀಲ್ದಾರರ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101
OFFICE OF THE TAHASILDAR, BELLARY DISTRICT, BELLARY-583101
Tel:08392-277415 Email Us:tahbel@gmail.com

ಸಂ/ಕಂ/ಪಹಣಿ/1057/2015-16 ದಿನಾಂಕ:01/06/2016

# ನಡವಳಿ

**ವಿಷಯ:**-ಬಳ್ಳಾರಿ ತಾಲೂಕು, ಬೈಲೂರು ಗ್ರಾಮದ ಸರ್ವೆ ನಂ:209 ವಿಸ್ತೀರ್ಣ:3.12, ಸರ್ವೆ ನಂ:210/ಎ ಬಿಸ್ತೀರ್ಣ:6.12, ಸರ್ವೆ ನಂ:234 ವಿಸ್ತೀರ್ಣ:9.31 ಮತ್ತು ಸರ್ವೆ ನಂ:235/ಬಿ ವಿಸ್ತೀರ್ಣ:3.10 ಎಕರೆ ಜಮೀನನ್ನು ಸಿವಿಲ್ ನ್ಯಾಯಾಲಯದ ಅದೇಶದಂತೆ ಹಕ್ಕುಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ:**-1)ಮಾನ್ಯ ಅಡಿಷಿನಲ್ ಸಿವಿಲ್ ಜಡ್ಜ ಸೀನಿಯರ್ ಡಿವಿಜನ್ ಬಳ್ಳಾರಿ ಇವರ ಓ.ಎಸ್ ನಂ:143/97 ದಿನಾಂಕ:12-10-2001

2)ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರ ಆರ್,ಎಫ್.ಎ ನಂ:1047/2001 ದಿನಾಂಕ:04-02-2008

3)ಮಾನ್ಯ ಸುಪ್ರೀಮ್ ಕೋರ್ಟ್ ನ್ಯೂ ದೆಹಲಿ ಇವರ ಸಿವಿಲ್ ಅಪೀಲ್ ಸಂಖ್ಯೆ:101461/2010 ದಿನಾಂಕ:29-07-2015

******

**ಪ್ರಸ್ತಾವನೆ:**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಪಿ.ಎಂ ನಾಗನಾಥಸ್ವಾಮಿ ತಂದೆ ಸಂಗಮೇಶ್ವರ ಸ್ವಾಮಿ ಬೈಲೂರು ಗ್ರಾಮ ಬಳ್ಳಾರಿ ತಾಲೂಕು ಇವರು ಉಲ್ಲಥೇಖ (1), (2) ಮತ್ತು (3)ರ ನ್ಯಾಯಾಲಯ ಆದೇಶಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿರುತ್ತಾರೆ.

ಉಲ್ಲೇಖಿತ (1)ರ ಅಡಿಷಿನಲ್ ಸಿವಿಲ್ ಜೆಡ್ಜ್ (ಸೀನಿಯರ್ ಡಿವಿಜನ್) ಬಳ್ಳಾರಿ ಇವರ ಓ.ಎಸ್. ನಂ143/1997 ದಿನಾಂಕ:12-10-2001ರ ಆದೇಶದಲ್ಲಿ ಬೈಲೂರು ಗ್ರಾಮದ

| ಕ್ರ.ಸ | ಸರ್ವೆ ನಂ: | ವಿಸ್ತೀರ್ಣ (ಎಕರೆ |
|---|---|---|
| 1 | 209 | 3.12 |
| 2 | 210/ಎ | 6.12 |
| 3 | 234 | 9.31 |
| 4 | 235/ಬಿ | 3.10 |
| **ಒಟ್ಟು** | | **21.65** |

ಸದರಿ ಜಮೀನುಗಳಿಗೆ ಶ್ರೀ ಪಿ.ಎಂ ನಾಗನಾಥ ಸ್ವಾಮಿ ತಂದೆ ಸಂಗಮೇಶ್ವರ ಸ್ವಾಮಿ ಇವರು ಮಾಲೀಕರಾಗಿರುತ್ತಾರೆಂದು ಆದೇಶಿಸಿರುತ್ತಾರೆ.

ಸದರಿ ಆದೇಶದ ವಿರುದ್ದ ಉಚ್ಚ ನ್ಯಾಯಾಲಯ ಬೆಂಗಳೂರು ಮೇಲ್ಮನವಿ ಅರ್ಜಿ ಸಂಖ್ಯೆ:1047/2001 1)ಶ್ರೀ ಪಿ.ಎಂ ನಾಗಯ್ಯ ಸ್ವಾಮಿ ತಂದೆ ಸಂಗಮೇಶ್ವರ ಸ್ವಾಮಿ 2) ಶ್ರೀ ವೀರಯ್ಯ ಸ್ವಾಮಿ ತಂದೆ ಪಿ.ಎಂ ನಾಗಯ್ಯ ಸ್ವಾಮಿ ಇವರು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯು ಬಗ್ಗೆ ಘನ ಉಚ್ಚ ನ್ಯಾಯಾಲುವು ತಿರಸ್ಕರಿಸಿರುತ್ತದೆ.

ಸದರಿ ಆದೇಶದ ವಿರುದ್ದ ಸದರಿ ಮೇಲ್ಮನವಿದಾರರು ಸರ್ವೋಚ್ಚ ನ್ಯಾಯಾಲಯ ನವದೆಹಲಿ ಇವರಲ್ಲಿ ಸಿವಿಲ್ ಅಪೀಲ್ ಸಂಖ್ಯೆ:10146/2010 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ನ್ಯಾಯಾಲುವು ಸದರಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತದೆ.

ಮೇಲ್ಕಾಣಿಸಿದ ಎಲ್ಲಾ ನ್ಯಾಯಾಲಯ ಆದೇಶಗಳ ಆಧಾರದ ಮೇರೆಗೆ ಮೇಲ್ಕಾಣಿಸಿದ ಜಮೀನುಗಳಿಗೆ ಅರ್ಜಿದಾರರು ಮಾಲೀಕರಾಗಿರುವುದರಿಂದ ಖಾತೆ ಬದಲಾವಣೆಗೊಳಿಸಲು KLR Act1964 ಕಲಂ128ರ ಅಡಿಯಲ್ಲಿ ನಮೂನೆ-21 ಜಾರಿಮಾಡಲಾಗಿ ಶ್ರೀ ಪಿ.ಎಂ ಸಂಗಮೇಶ್ವರ ಸ್ವಾಮಿ ತಂದೆ ಪಿ.ಎಂ ವೀರೇಶ್ವರಯ್ಯ ಸ್ವಾಮಿ ಇವರು ದಿನಾಂಕ: 30-04-2016 ರಂದು ತಕರಾರರು ಅರ್ಜಿಸಲ್ಲಿಸಿರುತ್ತಾರೆಂದು ಕಂದಾಯ ನಿರೀಕ್ಷಕರು, ಕೊಳೋರು ವರದಿಸಲ್ಲಿಸಿರುತ್ತಾರೆ.

ಆದ್ದರಿಂದ ನೈಸರ್ಗಿಕ ನ್ಯಾಯದ ದೃಷ್ಠಿಯಿಂದ ಉಭಯ ಪಕ್ಷದವರಿಗೆ ನೋಟಿಸ್ ಜಾರಿಮಾಡಿ ದಿನಾಂಕ:30-05-2016 ರಂದು ವಿಚಾರಣೆಮಾಡಲಾಗಿ ತಕರಾರರುದಾರರು ಹಾಜರಿದ್ದು ಮತ್ತು ಅವರಪರವಾಗಿ ನ್ಯಾಯವಾದಿ ಡಿ.ನಾರಾಯಣ ಇವರು ಸದ್ರಿ ನ್ಯಾಯಲಯ ಆದೇಶಗಳಿಗೆ ಯಾವುದೇ ತರಹದ ತಡೆಯಾಜ್ಞಾ ಇರುವುದಿಲ್ಲವೆಂದು ಮತ್ತು ಸರ್ವೋಚ್ಚ ನ್ಯಾಯಾಲಯ ದೆಹಲಿಯಲ್ಲಿ ಮರು ಆದೇಶಕ್ಕಾಗಿ ಅಪೀಲ್ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದ್ರಿ ತಕರಾರರು ಅರ್ಜಿಯನ್ನು ತಿರಸ್ಕರಿಸಿದೆ.

ಆದ್ದರಿಂದ ನ್ಯಾಯಲಯಗಳ ತಡೆಯಾಜ್ಞ ಇರುವುದಿಲ್ಲವಾದ್ದರಿಂದ ಸರ್ವೋಚ್ಚ ನ್ಯಾಯಾಲಯ ಮತ್ತು ನ್ಯಾಯಾಲಯಗಳ ಆದೇಶದಂತೆ ಈ ಕೆಳಗಿನಂತೆ ಆದೇಶ

**-::ಆದೇಶ::-**

**ಸಂ/ಕಂ/ವಿವಾದ/ 1057 /2016-17** **ದಿನಾಂಕ:30 / 5 /2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಈ ಎಲ್ಲಾ ಕಾರಣಗಳಿಂದಾಗಿ ಬಳ್ಳಾರಿ ತಾಲೂಕು, ಬೈಲೂರು ಗ್ರಾಮದ ಸರ್ವೆ ನಂ:209 ವಿಸ್ತೀರ್ಣ:3.12, ಸರ್ವೆ ನಂ:210/ಎ ವಿಸ್ತೀರ್ಣ:6.12, ಸರ್ವೆ ನಂ:234 ವಿಸ್ತೀರ್ಣ:9.31 ಮತ್ತು ಸರ್ವೆ ನಂ:235/ಬಿ ವಿಸ್ತೀರ್ಣ:3.10 ಎಕರೆ ಜಮೀನುಗಳಿಗೆ ಶ್ರೀ ಪಿ.ಎಂ ನಾಗನಾಥ ಸ್ವಾಮಿ ತಂದೆ ಸಂಗಮೇಶ್ವರ ಸ್ವಾಮಿ ಇವರಿಗೆ ಖಾತೆ ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 30.5.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಪಿ.ಎಂ.ನಾಗನಾಥ ಸ್ವಾಮಿ
06/06/16

30/5/16
ತಹಶೀಲ್ದಾರರು
ಬಳ್ಳಾರಿ.
Tasildar, Bellary.

<u>ಪ್ರತಿಯನ್ನು:</u>
1.ವಾದಿಗಳು
2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3.ಆದೇಶದ ಕಡತಕ್ಕೆ.